ಕರ್ನಾಟಕ ಸರ್ಕಾರ

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಸಂಖ್ಯೆ:ಪಪೂಶಿಇ/ ಶೈ.ಶಾ-04/ ವಿ.ದಾ.ಕು-01/1/2015-16 ದಿನಾಂಕ: 05.2015.

ತಿದ್ದುಪಡಿ ಸುತ್ತೋಲೆ

ವಿಷಯ: IGCSE ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಪದವಿ ಪೂರ್ವ ಕಾಲೇಜುಗಳಿಗೆ ದಾಖಲಾತಿಯನ್ನು ನೀಡುವ ಕುರಿತು.

ಉಲ್ಲೇಖ: 1. ಮಾನ್ಯ ನಿರ್ದೇಶಕರ ಮೌಖಿಕ ಆದೇಶದ ದಿನಾಂಕ: 27.05.2015.
2. ಪೋಷಕರ ಹಾಗು ವಿದ್ಯಾರ್ಥಿಗಳ ಮನವಿ ಪತ್ರಗಳು.

***

ಪ್ರಥಮ ಪಿಯುಸಿ ದಾಖಲಾತಿಗೆ ಅರ್ಹರಿರುವ IGCSE ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ಶಾಲೆಯವರು/ಬೋರ್ಡ್‌ನವರು ನೀಡಿರುವ mock exam/predict markscard ಆಧಾರದ ಮೇಲೆ ಪ್ರಥಮ ಪಿಯುಸಿಗೆ ತಾತ್ಕಾಲಿಕ ದಾಖಲಾತಿಯನ್ನು ಮಾಡಿಕೊಳ್ಳಬಹುದು. ಇಂತಹ ವಿದ್ಯಾರ್ಥಿಗಳು ಇಲಾಖೆಗೆ Provision Eligibility Certificate ಪಡೆಯಲು ಅರ್ಜಿ ಸಲ್ಲಿಸಬೇಕು. ಅರ್ಜಿಯ ಜೋತೆ ಈ ಕೆಳಗೆ ನೀಡಿರುವ ಮಾದರಿಯಲ್ಲಿ 50 ರೂಗಳ e-stamp ನಲ್ಲಿ ಪ್ರಮಾಣ ಪತ್ರದ ದೃಢೀಕೃತೆಯನ್ನು ಸಲ್ಲಿಸಬೇಕು. ಮೂಲ ಪ್ರಮಾಣ ಪತ್ರವನ್ನು ದಾಖಲಾಗುವ ಕಾಲೇಜಿಗೆ ಇಲಾಖೆಯು ನೀಡುವ ತಾತ್ಕಾಲಿಕ ಅರ್ಹತಾ ಪ್ರಮಾಣ ಪತ್ರದ ಜೋತೆ ಸಲ್ಲಿಸಬೇಕು. ದೃಢೀಕೃತ ಪ್ರಮಾಣ ಪತ್ರವನ್ನು ಸಲ್ಲಿಸುವ ವಿದ್ಯಾರ್ಥಿಗಳಿಗೆ ಮಾತ್ರ Provision Eligibility Certificate ವನ್ನು ನೀಡಲಾಗುವುದು. IGCSE ವಿದ್ಯಾರ್ಥಿಗಳನ್ನು ನಿರ್ದೇಶನಾಲಯದಿಂದ ತಾತ್ಕಾಲಿಕ ಅರ್ಹತಾ ಪತ್ರ ಪಡೆದ ನಂತರವೇ ದಾಖಲಾತಿ ಮಾಡಿಕೊಳ್ಳಬೇಕು. ತಾತ್ಕಾಲಿಕ ಅರ್ಹತಾ ಪತ್ರ ಪಡೆಯದ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡಲ್ಲಿ ಪ್ರಾಂಶುಪಾಲರೇ ಪೂರ್ಣ ಜವಾಬ್ದಾರರಾಗಿರುತ್ತಾರೆ. ಈ ರೀತಿ ದಾಖಲಾತಿ ಪಡೆದ ವಿದ್ಯಾರ್ಥಿಗಳು ಸಲ್ಲಿಸುವ ಮೂಲ ಅಂಕಪಟ್ಟಿಯನ್ನು ಪರಿಶೀಲಿಸಿ ದಾಖಲಾತಿಯನ್ನು ಉರ್ಜಿತಗೊಳಿಸುವ ಅಥವಾ ನೀರಾಕರಿಸುವ ಅಧಿಕಾರವನ್ನು ಪ್ರಾಂಶುಪಾಲರಿಗೆ ನೀಡಲಾಗಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ

1. ಎಲ್ಲಾ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರುಗಳಿಗೆ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಮೂಲಕ ಮುಂದಿನ ಕ್ರಮಕ್ಕಾಗಿ.
2. ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಮುಂದಿನ ಕ್ರಮಕ್ಕಾಗಿ ಇದರ ಪ್ರತಿಯನ್ನು ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ/ಉಪನ್ಯಾಸಕರ ಗಮನಕ್ಕೆ ತರಲು.

ಪ್ರತಿಗಳು:

3. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಸಾಮಾನ್ಯ), ಬಹು ಮಹಡಿ ಕಟ್ಟಡ, ಬೆಂಗಳೂರು. ಇವರಿಗೆ ಮಾಹಿತಿಗಾಗಿ
4. ಜಂಟಿ ನಿರ್ದೇಶಕರು (ಆಡಳಿತ) ಮತ್ತು (ಪರೀಕ್ಷೆ) ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಮಾಹಿತಿಗಾಗಿ.
5. ನಿರ್ದೇಶಕರ ಅಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ.
6. ಇ-ಅಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.
7. ಕಛೇರಿ ಪ್ರತಿ

ವ್ಯಾಸಂಗ ಮಾಡಿ ಪದವಿ ಪೂರ್ವ ಶಿಕ್ಷಣಕ್ಕೆ ದಾಖಲಾತಿನ್ನು ಪಡೆಯುವ ವಿದ್ಯಾರ್ಥಿಗಳಿಂದ ಪಡೆಯ ಬೇಕಾದ

ಮುಚ್ಚಳಿಕೆ

ಶ್ರೀಮತಿ/ಶ್ರೀ ______________________________ ಆದ ನಾನು ನನ್ನ ಮಗಳು/ಮಗ ಆದ ಕು______________________________ ಇವರು IGCSE ಪಠ್ಯಕ್ರಮದಲ್ಲಿ 2014-15ನೇ ಶೈಕ್ಷಣಿಕ ಸಾಲಿನಲ್ಲಿ ______________________________ ಶಾಲೆ/ಕಾಲೇಜು ನಲ್ಲಿ 10ನೇ ತರಗತಿಯನ್ನು ಅಧ್ಯಯನ ಮಾಡಿರುತ್ತಾಳೆ/ತ್ತಾನೆ. ಅವಳ/ ಅವನ 10ನೇ ತರಗತಿಯ ಫಲಿತಾಂಶ ಪ್ರಕಟಣೆಯಾಗದ /ಪ್ರಕಟಣೆಯಾದ ಇವರ ಮೂಲ ಅಂಕಪಟ್ಟಿ ಸಂಬಂಧಿಸಿದ ಶಾಲಾ/ಕಾಲೇಜಿನಿಗೆ ತಲುಪಿರುವುದಿಲ್ಲ ಆದಕಾರಣ ಅವಳ/ಅವನ mock exam/predict markscard ಆಧಾರದ ಮೇಲೆ ತಾತ್ಕಾಲಿಕ ದಾಖಲಾತಿಯನ್ನು ನೀಡುವಂತೆ ಕೋರುತ್ತೇವೆ.

1. ನಾವು ಪಡೆಯುವ ಈ ದಾಖಲಾತಿಯು ತಾತ್ಕಾಲಿಕವಾಗಿದ್ದು ಮೂಲ ಅಂಕಪಟ್ಟಿ ಮತ್ತು ಅಗತ್ಯವಾದ ಇತರೆ ದಾಖಲೆಗಳನ್ನು ಕಾಲೇಜಿಗೆ ಸಲ್ಲಿಸಿದ ನಂತರವಷ್ಟೇ ದಾಖಲಾತಿಯು ಊರ್ಜಿತವಾಗುತ್ತದೆ ಎಂಬ ಷರತ್ತಿಗೆ ಬದ್ಧರಾಗಿ ಈ ದಾಖಲಾತಿಯನ್ನು ಪಡೆದಿರುತ್ತೇವೆ.
2. ಅರ್ಹ ಮೂಲ ಅಂಕಪಟ್ಟಿಯನ್ನು ______________ ತಿಂಗಳೊಳಗಿ ಸಲ್ಲಿಸಲು ವಿಫಲವಾದಲ್ಲಿ / ಫಲಿತಾಂಶ ಅನುತ್ತೀರ್ಣವೆಂದು ಘೋಷಿತವಾದಲ್ಲಿ /ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ಯಾವುದೇ ಮುನ್ನಸೂಚನೆ ಇಲ್ಲದೇ ದಾಖಲಾತಿಯನ್ನು ನಿಯಮಾನುಸಾರ ಇಲಾಖೆಯು ತಿರಸ್ಕಾರಿಸಬಹುದಾಗಿದೆ.
3. ಹೀಗೆ ತಿರಸ್ಕಾರಿಸಿದ ದಾಖಲಾತಿಯನ್ನು ಊರ್ಜಿತಗೊಳಿಸಲು ಇಲಾಖೆಗೆ ಪುನರ್ ಮನವಿಯನ್ನು ಸಲ್ಲಿಸುವುದಿಲ್ಲ.
4. ತಿರಸ್ಕರಿಸಿದ ದಾಖಲಾತಿ ಕುರಿತು ಯಾವುದೇ ಕಾರಣಕ್ಕು ನ್ಯಾಯಾಲಯದ ಮೊರೆ ಹೋಗುವುದಿಲ್ಲ.
5. ಯಾವುದೇ ಶುಲ್ಕವನ್ನು ಹಿಂದಿರುಗಿಸುವಂತೆ ದಾಖಲಾತಿಯನ್ನು ಪಡೆದಿರುವ ಪದವಿ ಪೂರ್ವ ಕಾಲೇಜಿಗೆ ಸೂಚಿಸಲು ಇಲಾಖೆಯನ್ನು ಕೋರುವುದಿಲ್ಲ.

ಈ ಮೇಲ್ಕಂಡ ಎಲ್ಲಾ ಷರತ್ತುಗಳಿಗೆ ಬದ್ದನಾಗಿ ದಾಖಲಾತಿಯನ್ನು ಪಡೆಡಯಲಾಗಿದೆ.

ವಿದ್ಯಾರ್ಥಿ ಸಹಿ                                                  ತಂದೆ/ತಾಯಿ/ಪೋಷಕರ ಸಹಿ.

ದಿನಾಂಕ:

ಸ್ಥಳ:

* ಈ ಮುಚ್ಚಳಿಕೆ ಪತ್ರವನ್ನು ರೂ.50/- e-stamp ಪೇಪರ್ ಮೇಲೆ ನಮೂದಿಸಿ Notaryಎದುರು ದಾಖಲಾಯಿಸಿ, ನಂತರ ನಿರ್ದೇಶನಾಲಯಕ್ಕೆ ಸಲ್ಲಿಸುವುದು.